ಪ್ರಸಾರವಾದ ಮತ್ತು ವಿತರಿಸಲಾದ ಶುಕ್ರವಾರದ ಪ್ರವಚನ (ಖುತ್ಬಾ)

ದಿನಾಂಕ: 22 ರಬೀವುಲ್ ಅವ್ವಲ್ 1448 ಹಿಜ್ರಿ - 04/09/2026

# ವಿಷಯ: ಅಪಶಕುನ: ಇದರ ಅಪಾಯಗಳು ಮತ್ತು ಪರಿಹಾರ

## ಮೊದಲನೇ ಪ್ರವಚನ:

ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತಕ್ಕದ್ದು. ನಾವು ಅವನನ್ನೇ ಸ್ತುತಿಸುತ್ತೇವೆ, ಅವನಲ್ಲೇ ಸಹಾಯವನ್ನು ಹಾಗೂ ಕ್ಷಮೆಯನ್ನು ಯಾಚಿಸುತ್ತೇವೆ. ನಮ್ಮ ಆತ್ಮಗಳ ಕೆಡುಕುಗಳಿಂದ ಮತ್ತು ದುಷ್ಕೃತ್ಯಗಳಿಂದ ಅಲ್ಲಾಹನಲ್ಲಿ ರಕ್ಷಣೆ ಬೇಡುತ್ತೇವೆ. ಅಲ್ಲಾಹನು ಯಾರಿಗೆ ಸನ್ಮಾರ್ಗ ತೋರುತ್ತಾನೋ ಅವನನ್ನು ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ; ಮತ್ತು ಯಾರನ್ನು ದಾರಿ ತಪ್ಪಿಸುತ್ತಾನೋ ಅವನಿಗೆ ಸನ್ಮಾರ್ಗ ತೋರಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಾಹನನ್ನು ಹೊರತುಪಡಿಸಿ ಆರಾಧನೆಗೆ ಅರ್ಹನಾದವನು ಬೇರಾರೂ ಇಲ್ಲ, ಅವನು ಏಕನು, ಅವನಿಗೆ ಯಾವುದೇ ಪಾಲುದಾರರಿಲ್ಲ ಎಂದೂ ಮುಹಮ್ಮದ್ ﷺ ಅವರು ಅಲ್ಲಾಹನ ದಾಸ ಮತ್ತು ಪ್ರವಾದಿಯಾಗಿದ್ದಾರೆ ಎಂದೂ ನಾನು ಸಾಕ್ಷಿ ಹೇಳುತ್ತೇನೆ. ಅವರು ಆತನ ಸಮಸ್ತ ಸೃಷ್ಟಿಗಳಲ್ಲಿ ಅತಿ ಶ್ರೇಷ್ಠರೂ ಅತ್ಯಂತ ಪ್ರಿಯರೂ ಆಗಿದ್ದಾರೆ. ಅವರು ನೀಡಲಾದ ಅಮಾನತ್ತನ್ನು ಅತ್ಯಂತ ಪ್ರಾಮಾಣಿಕತೆಯಿಂದ ತಲುಪಿಸಿದರು, ಪ್ರವಾದಿತ್ವದ ಸಂದೇಶವನ್ನು ಪ್ರಸರಿಸಿದರು, ಮತ್ತು ದೈವಿಕ ಮಾರ್ಗದಲ್ಲಿ ಅಂತಿಮ ಉಸಿರಿರುವವರೆಗೆ ಸತ್ಯದ ಪರವಾಗಿ ಸತತ ಹೋರಾಟ ನಡೆಸಿದರು. ಅಲ್ಲಾಹನು ಅವರ ಮೇಲೆಯೂ, ಅವರ ಪರಿವಾರದವರ ಮೇಲೆಯೂ ಮತ್ತು ಸಹಚರರ (ಸಹಾಬಿಗಳ) ಮೇಲೆಯೂ ಅನಂತ ಶುಭ ಹಾರೈಕೆ ಹಾಗೂ ಶಾಂತಿಯನ್ನು ಸುರಿಸಲಿ.

"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲಿ ಅಂಜಿರಿ ಮತ್ತು ಮುಸ್ಲಿಮರಾಗದ ಹೊರತು ಮರಣ ಹೊಂದಬೇಡಿರಿ." [ಕುರ್‌ಆನ್ - ಆಲ್ ಇಮ್ರಾನ್: 102]

ಅತ್ಯಂತ ಸತ್ಯವಾದ ಮಾತು ಅಲ್ಲಾಹನ ಗ್ರಂಥ (ಕುರ್‌ಆನ್) ಆಗಿದೆ ಮತ್ತು ಶ್ರೇಷ್ಠವಾದ ಮಾರ್ಗದರ್ಶನ ಮುಹಮ್ಮದ್ ﷺ ಅವರ ಮಾರ್ಗದರ್ಶನವಾಗಿದೆ. ಧರ್ಮದಲ್ಲಿ ಹೊಸದಾಗಿ ಸೇರಿಸಲಾದ ಪ್ರತಿಯೊಂದು ವಿಷಯವೂ ಕೆಡುಕಾಗಿದೆ, ಅಂತಹ ಪ್ರತಿಯೊಂದು ನವೀನತೆಯೂ ಅಧರ್ಮದ ಬಿದ್ ಅತ್ ಅಥವಾ ನವೀನಾಚಾರವಾಗಿದೆ, ಪ್ರತಿಯೊಂದು ಬಿದ್ ಅತ್ ದಾರಿಗೇಡಿತನವಾಗಿದೆ ಮತ್ತು ಪ್ರತಿಯೊಂದು ದಾರಿಗೇಡಿತನದ ಅಂತ್ಯ ನರಕವಾಗಿದೆ.

ಅಲ್ಲಾಹನ ದಾಸರೇ: ಸರಿಯಾದ ಈಮಾನ್ ಅಥವಾ ವಿಶ್ವಾಸ ಮತ್ತು ಪರಿಪೂರ್ಣ ತೌಹೀದ್ ಅಥವಾ ಏಕದೇವತ್ವದ ಬೇಡಿಕೆಯೇನೆಂದರೆ, ಮನುಷ್ಯನು ತನ್ನ ಈಮಾನ್ ಮತ್ತು ಧರ್ಮದ ಮೇಲೆ ಪ್ರಭಾವ ಬೀರುವ ಹಾಗೂ ತೌಹೀದ್ ಮತ್ತು ನಂಬಿಕೆಗೆ ಧಕ್ಕೆ ತರುವ ಪ್ರತಿಯೊಂದು

ವಿಷಯದಿಂದ ದೂರವಿರಬೇಕು. ನಮ್ಮ ಸತ್ಯಧರ್ಮವು ನಿರ್ಮೂಲನೆಗೊಳಿಸಿದ ಮತ್ತು ನಮ್ಮ ಪ್ರವಾದಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರು ಯಾವುದರ ಬಗ್ಗೆ ಎಚ್ಚರಿಸಿದ್ದಾರೋ ಅಂತಹ ಜಾಹಿಲಿಯ್ಯತ್ ಅಥವಾ ಅಜ್ಞಾನ ಕಾಲದ ಆಚಾರಗಳಲ್ಲಿ ಅಪಶಕುನವನ್ನು ನಂಬುವುದೂ ಒಂದಾಗಿದೆ. ಏಕೆಂದರೆ, ಇದನ್ನು ನಂಬುವ ವ್ಯಕ್ತಿಯು ತಾನು ಬಯಸಿದ್ದನ್ನು ಪಡೆಯಲು ಮತ್ತು ತಾನು ಹೆದರುವುದರಿಂದ ರಕ್ಷಣೆ ಪಡೆಯಲು ಅಲ್ಲಾಹನ ಹೊರತಾಗಿ ಇತರರತ್ತ ಗಮನ ಹರಿಸುತ್ತಾನೆ.

ಅವಿಶ್ವಾಸಿಗಳು ಪಕ್ಷಿಗಳನ್ನು ನೋಡಿ ಅಪಶಕುನ ಪಡೆಯುತ್ತಿದ್ದರು. ಪಕ್ಷಿಯು ಬಲಗಡೆಗೆ ಹಾರಿದರೆ, 'ಇದು ಶುಭ' ಎಂದು ಭಾವಿಸಿ ತಾವು ಮಾಡಲು ಬಯಸಿದ ಕೆಲಸವನ್ನು ಮಾಡುತ್ತಿದ್ದರು. ಒಂದು ವೇಳೆ ಅದು ಎಡಗಡೆಗೆ ಹಾರಿದರೆ, 'ಇದು ಅಶುಭ' ಎಂದು ಹೇಳಿ ಆ ಕೆಲಸದಿಂದ ಹಿಂದೆ ಸರಿಯುತ್ತಿದ್ದರು. ಹಾಗೆಯೇ ಯಾರಾದರೊಬ್ಬರ ಮನೆಯ ಮೇಲೆ ಕಾಗೆ ಕುಳಿತರೆ, ಅದನ್ನು ದುರಾದೃಷ್ಟವೆಂದು ಭಾವಿಸಿ ಕೆಡುಕು ಸಂಭವಿಸುತ್ತದೆ ಎಂದು ಹೆದರುತ್ತಿದ್ದರು.

ಅಲ್ಲಾಹನ ದಾಸರೇ! ಅಪಶಕುನಕ್ಕೆ ಹಲವು ರೂಪಗಳು ಮತ್ತು ವಿಧಗಳಿವೆ:

* ಕ್ರಿಶ್ಚಿಯನ್ನರು ನಂಬುವಂತೆ '13' ರಂತಹ ನಿರ್ದಿಷ್ಟ ಸಂಖ್ಯೆಯನ್ನು ಅಪಶಕುನವೆಂದು ಭಾವಿಸುವುದು.

* ಅಥವಾ ನಿರ್ದಿಷ್ಟ ವ್ಯಕ್ತಿಯನ್ನು ನೋಡಿ ಅಪಶಕುನ ಪಡೆಯುವುದು, ಉದಾಹರಣೆಗೆ: "ಅವನ ಮುಖವೇ ಅಪಶಕುನ, ಅವನ ಜೊತೆ ಪ್ರಯಾಣಿಸಿದಾಗಲೆಲ್ಲಾ ನನಗೆ ತೊಂದರೆಯೇ ಆಯಿತು" ಎಂದು ಹೇಳುವುದು.

* ಅಥವಾ ಕೆಲವರು "ಖೈರ್ ಯಾ ತೈರ್" (ಪಕ್ಷಿಯೇ ಶುಭ ತರಲಿ) ಎಂದು ಹೇಳುವುದು.

ಇವೆಲ್ಲವೂ ನಿಷೇಧಿಸಲ್ಪಟ್ಟಿವೆ. ಏಕೆಂದರೆ ನೈಜ ಒಳಿತು ಅಲ್ಲಾಹನಿಂದ ಮಾತ್ರ ಬರುತ್ತದೆ, ಎಲ್ಲ ಒಳಿತುಗಳೂ ಅವನ ಕೈಯಲ್ಲೇ ಇವೆ ಮತ್ತು ಪ್ರತಿಯೊಂದು ವಿಷಯವೂ ಅವನತ್ತಲೇ ಮರಳುತ್ತದೆ.

ವಾಸ್ತವವಾಗಿ, ಅಪಶಕುನ ಎಂಬುದು ಶೈತಾನನು ಉಂಟುಮಾಡುವ ಸಂಶಯ, ಹೆದರಿಕೆ ಮತ್ತು ವಸ್‌ವಾಸ್ ಆಗಿದೆ. ಇದು ಅಲ್ಲಾಹನ ಹೊರತಾಗಿ ಇತರರೊಂದಿಗೆ ಸಂಬಂಧ ಹೊಂದುವುದು ಮತ್ತು ಅಲ್ಲಾಹನ ಬಗ್ಗೆ ಕೆಟ್ಟ ಕಲ್ಪನೆ ಮಾಡಿಕೊಳ್ಳುವುದಕ್ಕೆ ಸಮನಾಗಿದೆ. ಏಕೆಂದರೆ ಹಾಗೆ ಮಾಡುವವನು, ಅಲ್ಲಾಹನ ಹೊರತಾಗಿ ಈ ವಸ್ತುವೇ ನನಗೆ ಲಾಭ ಅಥವಾ ನಷ್ಟವನ್ನು ಉಂಟುಮಾಡುತ್ತದೆ ಎಂದು ನಂಬುತ್ತಾನೆ. ಆದ್ದರಿಂದ ಇದನ್ನು ವಿರೋಧಿಸುವುದು ಮತ್ತು ಇದರ ಬೇರುಗಳನ್ನು ಕಿತ್ತೊಗೆಯುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ವಿಶೇಷವಾಗಿ ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಇದನ್ನು 'ಶಿರ್ಕ್' ಅಥವಾ ಬಹುದೇವಾರಾಧನೆ ಎಂದು ಕರೆದಿದ್ದಾರೆ ಮತ್ತು ಸಮುದಾಯಕ್ಕೆ ಎಚ್ಚರಿಕೆ ನೀಡಿದ್ದಾರೆ.

ಇಬ್ನು ಮಸ್‌ಊದ್ (ರ) ಅವರಿಂದ ವರದಿಯಾಗಿದೆ, ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು:

«ಅಪಶಕುನವನ್ನು ನಂಬುವುದು ಶಿರ್ಕ್ ಆಗಿದೆ, ಅಪಶಕುನವನ್ನು ನಂಬುವುದು ಶಿರ್ಕ್ ಆಗಿದೆ. »* (ಅಹ್ಮದ್, ಅಬೂ ದಾವೂದ್). (ಅಪಶಕುನ ಅಥವಾ ತಿಯರಃ ಎಂಬುದು ದುರಾದೃಷ್ಟದ ನಂಬಿಕೆಯ ಒಂದು ರೂಪವಾಗಿದೆ).

ಪ್ರವಾದಿಗಳ ಶತ್ರುಗಳಾಗಿದ್ದ ಕಾಫಿರ್ ಅಥವಾ ಅವಿಶ್ವಾಸಿಗಳ ಗುಣಗಳಲ್ಲಿ ಅಪಶಕುನವನ್ನು ನಂಬುವುದೂ ಒಂದಾಗಿತ್ತು. ಫಿರ್‌ಔನನ  ಜನರಿಗೆ ಯಾವುದಾದರೂ ವಿಪತ್ತು ಅಥವಾ ಬರಗಾಲ ಬಂದಾಗ, ತಮಗೆ ಬಂದ ಈ ಸಂಕಟವು ಮೂಸಾ (ಅಲೈಹಿಸ್ಸಲಾಮ್) ಮತ್ತು ಅವರ ಅನುಯಾಯಿಗಳ ಅಪಶಕುನದಿಂದಾಗಿಯೇ ಬಂದಿದೆ ಎಂದು ಹೇಳುತ್ತಿದ್ದರು.

ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳುತ್ತಾನೆ:

"ಮತ್ತು ಅವರಿಗೆ ಯಾವುದಾದರೂ ತೊಂದರೆ ಅಥವಾ ಕೆಡುಕು ಬಂದರೆ, ಅದನ್ನು ಮೂಸಾ ಮತ್ತು ಅವರ ಜೊತೆಗಿದ್ದವರ ಅಪಶಕುನವೆಂದು ಭಾವಿಸುತ್ತಿದ್ದರು." [ಅಲ್-ಅಅರಾಫ್: 131]

ಇದಕ್ಕೆ ಅಲ್ಲಾಹನು ಅವರಿಗೆ ಉತ್ತರ ನೀಡುತ್ತಾ ಹೇಳುತ್ತಾನೆ: "ತಿಳಿದುಕೊಳ್ಳಿ! ಅವರ ಭಾಗ್ಯ/ವಿಧಿಯು ಅಲ್ಲಾಹನ ಬಳಿಯಲ್ಲೇ ಇದೆ." ಅಂದರೆ, ಅವರಿಗೆ ಬಂದ ವಿಪತ್ತು ಅಲ್ಲಾಹನ ತೀರ್ಮಾನ ಮತ್ತು ಅವರ ಕುಫ್ರ್, ಪಾಪಗಳು ಹಾಗೂ ಮೂಸಾ (ಅಲೈಹಿಸ್ಸಲಾಮ್) ಅವರನ್ನು ನಿರಾಕರಿಸಿದ್ದರಿಂದಲೇ ಬಂದಿದೆ. ನಂತರ ಅಲ್ಲಾಹನು ಅವರಲ್ಲಿ ಹೆಚ್ಚಿನವರು ಅಜ್ಞಾನಿಗಳು ಎಂದು ವರ್ಣಿಸಿರುವುವನು.

ಏಕದೇವತ್ವವನ್ನು ನಂಬಿರುವ ಸತ್ಯವಿಶ್ವಾಸಿಗಳ ಸ್ಥಿತಿಯೇನೆಂದರೆ, ಅವರು ತೌಹೀದ್ ಅಥವಾ ಏಕದೇವೋಪಾಸನೆಯ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರುತ್ತಾರೆ ಮತ್ತು ಅದರಲ್ಲಿ ಲೋಪವೆಸಗುವವರನ್ನು ತೀವ್ರವಾಗಿ ತಡೆಯುತ್ತಾರೆ. ಒಮ್ಮೆ ಹಕ್ಕಿಯೊಂದು ಕೂಗುತ್ತಾ ಹಾರಿದಾಗ ಒಬ್ಬ ವ್ಯಕ್ತಿಯು: "ಖೈರ್, ಖೈರ್" (ಶುಭ, ಶುಭ) ಎಂದನು. ತಕ್ಷಣ ಇಬ್ನು  ಅಬ್ಬಾಸ್ (ರ) ಅವರು: "ಇದರಲ್ಲಿ ಶುಭವೂ ಇಲ್ಲ, ಅಶುಭವೂ ಇಲ್ಲ" ಎಂದು ಹೇಳಿದರು. ಆ ವ್ಯಕ್ತಿಯು ಆ ಹಕ್ಕಿಯು ಶುಭ ಅಥವಾ ಅಶುಭವನ್ನು ತರುತ್ತದೆ ಎಂದು ನಂಬಬಾರದು ಎಂಬ ಕಾರಣಕ್ಕಾಗಿ ತಕ್ಷಣವೇ ಅದನ್ನು ವಿರೋಧಿಸಿದರು.

ಓ ಮುಸ್ಲಿಂ ಬಾಂಧವರೇ!

ಕೆಲವೊಮ್ಮೆ ಯಾವುದೇ ಅರಿವಿಲ್ಲದೆ ಮನಸ್ಸಿನಲ್ಲಿ ಅಪಶಕುನದ ಆಲೋಚನೆ ಬರಬಹುದು. ಉದ್ದೇಶಪೂರ್ವಕವಲ್ಲದೆ ಕೆಲವು ವಸ್ತುಗಳಿಂದ ಅಪಶಕುನದ ಭಾವನೆ ಮೂಡಬಹುದು, ಇದರಿಂದ ಯಾರೂ ತಪ್ಪಿಸಿಕೊಳ್ಳುವುದು ಕಷ್ಟ. ಆದರೆ ಯಾರ ಮನಸ್ಸಿನಲ್ಲಾದರೂ ಅಂತಹ ಭಾವನೆ ಬಂದರೆ, ಅವನು ಅದನ್ನು ಕಡೆಗಣಿಸಿ, ತನ್ನ ರಕ್ಷಕನ ಮೇಲೆ ಭರವಸೆ ಇಟ್ಟು (ತವಕ್ಕಲ್ ಮಾಡಿ), ಭಯ ಮತ್ತು ನಿರೀಕ್ಷೆಯೊಂದಿಗೆ ತನ್ನ ಕೆಲಸವನ್ನು ಮುಂದುವರಿಸಿದರೆ, ಅದು ಅವನಿಗೆ

ಯಾವುದೇ ಹಾನಿ ಮಾಡುವುದಿಲ್ಲ. ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಕಲಿಸಿದ ಈ ದುಆವನ್ನು ಅವನು ಓದಬೇಕು:

«ಅಲ್ಲಾಹುಮ್ಮ ಲಾ ಯಅತೀ ಬಿಲ್ ಹಸನಾತಿ ಇಲ್ಲಾ ಅಂತ, ವಲಾ ಯದ್‌ಫಉ ಸ್ಸಯ್ಯಿಆತಿ ಇಲ್ಲಾ ಅಂತ, ವಲಾ ಹೌಲ ವಲಾ ಖುವ್ವತ ಇಲ್ಲಾ ಬಿಕ»

(ಓ ಅಲ್ಲಾಹ್! ನಿನ್ನ ಹೊರತು ಒಳಿತುಗಳನ್ನು ತರುವವನು ಯಾರೂ ಇಲ್ಲ, ನಿನ್ನ ಹೊರತು ಕೆಡುಕುಗಳನ್ನು ತಡೆಯುವವನು ಯಾರೂ ಇಲ್ಲ, ಮತ್ತು ನಿನ್ನ ಸಹಾಯವಿಲ್ಲದೆ ಯಾವುದೇ ಒಳಿತನ್ನು ಮಾಡಲು ಅಥವಾ ಕೆಡುಕಿನಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ) [ಅಬೂ ದಾವೂದ್].

ಆದರೆ ಯಾರಾದರೂ ತಾನು ಕಂಡ ಅಥವಾ ಕೇಳಿದ ಕೆಟ್ಟ ವಿಷಯದಿಂದಾಗಿ ಅಪಶಕುನವೆಂದು ಭಾವಿಸಿ ತಾನು ಮಾಡಲು ಬಯಸಿದ ಕೆಲಸವನ್ನು ಕೈಬಿಟ್ಟರೆ, ಅವನು ತೀವ್ರ ಅಪರಾಧ ಅಥವಾ ಪಾಪವೆಸಗಿದ್ದಾನೆ. ಅವನು ತಕ್ಷಣವೇ ಅಲ್ಲಾಹನಲ್ಲಿ ಪಶ್ಚಾತ್ತಾಪ ಅಂದರೆ ತೌಬಃ ಪಡಬೇಕು.

ಅಬ್ದುಲ್ಲಾಹ್ ಇಬ್ನು ಅಮ್ರ್ (ರ) ವರದಿ ಮಾಡುತ್ತಾರೆ, ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು:

«ಯಾರನ್ನಾದರೂ ಅಪಶಕುನದ ನಂಬಿಕೆಯು ಅವನ ಕೆಲಸದಿಂದ ಹಿಂತಿರುಗಿಸಿದರೆ, ಅವನು ಶಿರ್ಕ್ ಮಾಡಿದಂತೆ. »

ಸಹಾಬಿಗಳು ಕೇಳಿದರು: "ಓ ಅಲ್ಲಾಹನ ಪ್ರವಾದಿಯವರೇ! ಅದಕ್ಕೆ ಪ್ರಾಯಶ್ಚಿತ್ತವೇನು?"

ಪ್ರವಾದಿಯವರು ಹೇಳಿದರು:

«ಅವನು ಹೀಗೆ ಹೇಳಬೇಕು: 'ಅಲ್ಲಾಹುಮ್ಮ ಲಾ ಖೈರ ಇಲ್ಲಾ ಖೈರುಕ, ವಲಾ ತೈರ ಇಲ್ಲಾ ತೈರುಕ, ವಲಾ ಇಲಾಹ ಗೈರುಕ'»

(ಓ ಅಲ್ಲಾಹ್! ನಿನ್ನ ಒಳಿತಿನ ಹೊರತು ಬೇರೆ ಯಾವ ಒಳಿತೂ ಇಲ್ಲ, ನಿನ್ನ ವಿಧಿಯ ಹೊರತು ಬೇರೆ ಯಾವ ವಿಧಿಯೂ ಇಲ್ಲ, ಮತ್ತು ನಿನ್ನ ಹೊರತು ಬೇರೆ ಆರಾಧ್ಯನೂ ಇಲ್ಲ)* [ಅಹ್ಮದ್].

ಆದ್ದರಿಂದ ಮುಸ್ಲಿಮನಾದವನು ಈ ರೀತಿಯ ಸುಳ್ಳು ನಂಬಿಕೆಗಳಿಂದ ಸ್ವತಃ ರಕ್ಷಿಸಿಕೊಳ್ಳಬೇಕು ಮತ್ತು ಇತರರನ್ನೂ ಎಚ್ಚರಿಸಬೇಕು. ಏಕೆಂದರೆ ಅಪಶಕುನ ನಂಬುವವನು ಅಲ್ಲಾಹನ ಮೇಲಿನ ತವಕ್ಕಲ್ ಅಥವಾ ಭರವಸೆಯನ್ನು ಕಳೆದುಕೊಳ್ಳುತ್ತಾನೆ ಮತ್ತು ಕಾಲ್ಪನಿಕ ವಿಷಯಗಳಿಗೆ ಅಂಟಿಕೊಳ್ಳುತ್ತಾನೆ. ಬದಲಾಗಿ, ಪ್ರತಿಯೊಂದು ವಿಷಯದ ನಿಯಂತ್ರಣವನ್ನು ಹೊಂದಿರುವ ಅಲ್ಲಾಹನ ಮೇಲಷ್ಟೇ ಭರವಸೆಯಿಡಬೇಕು, ಮತ್ತು ಈ ಕಾಲ್ಪನಿಕ ಮೂಢನಂಬಿಕೆಗಳು ಅವನನ್ನು ತನ್ನ ಕೆಲಸದಿಂದ ತಡೆಯಬಾರದು. ಅಲ್ಲಾಹನು ನಮಗೂ ನಿಮಗೂ ಈ ಮಹಾನ್ ಕುರ್‌ಆನ್‌ನಲ್ಲಿ ಶುಭ ತರಲಿ, ಮತ್ತು ಇದರಲ್ಲಿರುವ ವಾಕ್ಯಗಳು ಹಾಗೂ ಉಪದೇಶಗಳಿಂದ ನಮಗೆ ಲಾಭವನ್ನು ತರಲಿ. ನಾನು ಈ ಮಾತನ್ನು ಹೇಳುತ್ತಾ, ನನಗಾಗಿ ಮತ್ತು ನಿಮಗಾಗಿ ಅಲ್ಲಾಹನಲ್ಲಿ

ಕ್ಷಮೆಯಾಚಿಸುತ್ತೇನೆ. ನೀವೂ ಆತನಲ್ಲಿ ಕ್ಷಮೆಯಾಚಿಸಿ ಮತ್ತು ಆತನತ್ತ ಪಶ್ಚಾತ್ತಾಪಪಡಿ; ನಿಶ್ಚಯವಾಗಿಯೂ ಆತನು ಅತ್ಯಂತ ಕ್ಷಮಾದಾತನೂ ಕರುಣಾಮಯಿಯೂ ಆಗಿದ್ದಾನೆ.

## ಎರಡನೇ ಪ್ರವಚನ:

ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ. ಆತನ ಅನುಗ್ರಹಗಳಿಗಾಗಿ ಸ್ತುತಿಗಳು, ಆತನ ಕೃಪೆಗೆ ಧನ್ಯವಾದಗಳು. ಆತನ ಸಂದೇಶ ಹಾಗೂ ಉದ್ದೇಶದ ಕಡೆಗೆ ಆಹ್ವಾನಿಸಿದ ಪ್ರವಾದಿ ಮುಹಮ್ಮದ್ ﷺ ಅವರ ಮೇಲೆಯೂ, ಅವರ ಪರಿವಾರದವರ ಹಾಗೂ ಸಹಚರರ ಮೇಲೆಯೂ ಅಂತಿಮ ದಿನದವರೆಗೆ ಅವರ ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬರ ಮೇಲೆಯೂ ಶಾಂತಿ-ಸಮ್ಮಾನಗಳು ಸದಾ ಇರಲಿ.

ಓ ಅಲ್ಲಾಹನ ದಾಸರೇ, ಅಲ್ಲಾಹನಿಗೆ ಹೆದರಿ ಜೀವಿಸಿರಿ. ರಹಸ್ಯದಲ್ಲೂ ಬಹಿರಂಗದಲ್ಲೂ ಆತನನ್ನು ಸ್ಮರಿಸಿರಿ, ಮತ್ತು ನೀವೆಲ್ಲರೂ ಆತನ ಬಳಿಗೇ ಮರಳಬೇಕಾಗಿದೆ ಎಂಬುದನ್ನು ನೆನಪಿನಲ್ಲಿಡಿರಿ.

ಓ ಮುಸ್ಲಿಮರೇ: 'ತಶಾಉಮ್' ಅಂದರೆ ಅಪಶಕುನ ಅಥವಾ ದುರಾದೃಷ್ಟದ ನಂಬಿಕೆ ಮತ್ತು 'ತಫಾಉಲ್' ಅಂದರೆ ಶುಭಶಕುನ ಅಥವಾ ಸಕಾರಾತ್ಮಕ ಚಿಂತನೆ) ನಡುವೆ ವ್ಯತ್ಯಾಸವಿದೆ.

* ಅಪಶಕುನ ನಂಬುವುದು ಶಿರ್ಕ್ ಮತ್ತು ಹರಾಮ್ ಅಥವಾ ನಿಷೇಧಿತ ವಿಚಾರವಾಗಿದೆ.

* ಶುಭಶಕುನ ಅಥವಾ ಉತ್ತಮ ನಿರೀಕ್ಷೆ ಇಟ್ಟುಕೊಳ್ಳುವುದು ಒಳ್ಳೆಯದು ಮತ್ತು ಮುಸ್ತಹಬ್ ಅಥವಾ ಮೆಚ್ಚುಗೆ ಪಡೆದ ಕೆಳಸವಾಗಿದೆ.

* ಅಪಶಕುನವು ಅಲ್ಲಾಹನ ಬಗ್ಗೆ ಕೆಟ್ಟ ಅಭಿಪ್ರಾಯ ಹೊಂದುವುದಾಗಿದೆ, ಆದರೆ ಶುಭಶಕುನವು ಅಲ್ಲಾಹನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದುವುದಾಗಿದೆ.

ಮುಸ್ಲಿಮನಿಗೆ ಪ್ರತಿಯೊಂದು ಸನ್ನಿವೇಶದಲ್ಲೂ ಅಲ್ಲಾಹನ ಬಗ್ಗೆ ಒಳ್ಳೆಯ ಅಭಿಪ್ರಾಯ ಅಥವಾ ಉತ್ತಮ ನಿರೀಕ್ಷೆ ಹೊಂದಲು ಆದೇಶಿಸಲಾಗಿದೆ. 'ಫಾಲ್' ಅಥವಾ ಶುಭಶಕುನ ಎಂದರೆ: ಒಬ್ಬ ವ್ಯಕ್ತಿಯು ಅಲ್ಲಾಹನ ಮೇಲೆ ಭರವಸೆಯಿಟ್ಟು ಒಂದು ಕೆಲಸವನ್ನು ಮಾಡಲು ಹೊರಟಾಗ, ಅವನಿಗೆ ಸಂತೋಷ ತರುವ ಒಳ್ಳೆಯ ಮಾತೊಂದು ಕೇಳಿಸುತ್ತದೆ. ಇದರಿಂದ ಅವನ ಉತ್ಸಾಹ ಮತ್ತು ಧೈರ್ಯ ಹೆಚ್ಚಾಗುತ್ತದೆ, ಅವನ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು 'ಮುಬಾರಕ್' (ಬರಕತ್ ಉಳ್ಳವನು) ಎಂಬ ಹೆಸರಿನ ವ್ಯಕ್ತಿಯನ್ನು ಕಂಡು, ಇಂದಿನ ದಿನ ಬರಕತಿನಿಂದ ಕೂಡಿರುತ್ತದೆ ಎಂದು ಶುಭ ನಿರೀಕ್ಷೆ ಇಟ್ಟುಕೊಳ್ಳುವುದು.

ಅನಸ್ (ರ) ವರದಿ ಮಾಡುತ್ತಾರೆ, ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು:

«ರೋಗ ಹರಡುವ ನಂಬಿಕೆಯೂ ಸರಿಯಲ್ಲ ಅಪಶಕುನವೂ ಸರಿಯಲ್ಲ. ಆದರೆ ನನಗೆ ಉತ್ತಮ ಶಕುನ ಅಥವಾ ಒಳ್ಳೆಯ ಮಾತು ಇಷ್ಟವಾಗುತ್ತದೆ.» (ಬುಖಾರಿ, ಮುಸ್ಲಿಂ).

ಹುದೈಬಿಯ್ಯ ಸಂಧಿಯ ಸಂದರ್ಭದಲ್ಲಿ, ಸುಹೇಲ್ ಇಬ್ನು ಅಮ್ರ್ (ಆಗ ಅವರಿನ್ನೂ ಮುಸ್ಲಿಮರಾಗಿರಲಿಲ್ಲ) ಪ್ರವಾದಿಯವರ ಬಳಿಗೆ ಬಂದಾಗ, ಪ್ರವಾದಿಯವರು ಅವರ ಹೆಸರನ್ನು

ಕೇಳಿ ಶುಭ ನಿರೀಕ್ಷೆಯಿಂದ: "ನಿಮ್ಮ ಕೆಲಸವು ಸಹಲ್ ಅಥವಾ ಸುಲಭವಾಯಿತು" ಎಂದು ಹೇಳಿದರು [ಬುಖಾರಿ].

ಇಮಾಮ್ ಇಬ್ನುಲ್-ಖಯ್ಯಿಮ್ (ರ) ಹೇಳುತ್ತಾರೆ: "ಶುಭಶಕುನವನ್ನು ಇಷ್ಟಪಡುವುದರಲ್ಲಿ ಯಾವುದೇ ಶಿರ್ಕ್ ಇಲ್ಲ. ಬದಲಾಗಿ ಅದು ಮಾನವನ ನೈಸರ್ಗಿಕ ಸ್ವಭಾವಕ್ಕೆ ಅನುಗುಣವಾಗಿದೆ. ಮಾನವ ಮನಸ್ಸು ತನಗೆ ಅನುಕೂಲಕರವಾದ ಮತ್ತು ಲಾಭದಾಯಕವಾದ ವಿಷಯಗಳತ್ತ ಆಕರ್ಷಿತವಾಗುತ್ತದೆ".

ಆದ್ದರಿಂದ ನಿಮ್ಮ ರಕ್ಷಕನ ಬಗ್ಗೆ ಸದಾ ಉತ್ತಮ ಅಭಿಪ್ರಾಯವಿಟ್ಟುಕೊಳ್ಳಿ, ನಿಮ್ಮ ಎಲ್ಲಾ ಕೆಲಸಗಳಲ್ಲೂ ಅವನ ಮೇಲೆಯೇ ಭರವಸೆಯಿಡಿ. ಅಲ್ಲಾಹನ ಬಗ್ಗೆ ಕೆಟ್ಟ ಅಭಿಪ್ರಾಯ ಹೊಂದುವುದರಿಂದ ದೂರವಿರಿ. ಅವನ ತೀರ್ಮಾನವೆಲ್ಲವೂ ಒಳಿತಿಗಾಗಿಯೇ ಇರುತ್ತದೆ. ಅಲ್ಲಾಹನು ಹೇಳುತ್ತಾನೆ: "ನಾನು ಅವನ ಮೇಲೆಯೇ ಭರವಸೆಯಿಟ್ಟಿದ್ದೇನೆ ಮತ್ತು ಅವನತ್ತಲೇ ಮರಳುತ್ತೇನೆ." [ಹೂದ್: 88]

ಓ ಅಲ್ಲಾಹ್, ನಮ್ಮ ಮನಸ್ಸಿಗೆ ಈಮಾನ್ ಅಥವಾ ಸತ್ಯವಿಶ್ವಾಸವನ್ನು ಇಷ್ಟವಾಗಿಸು ಮತ್ತು ಅದನ್ನು ನಮ್ಮ ಹೃದಯಗಳಲ್ಲಿ ಸುಂದರಗೊಳಿಸು. ಅಧರ್ಮ, ಪಾಪ ಹಾಗೂ ಅನಾದರಗಳನ್ನು ನಮಗೆ ಅಪ್ರಿಯಗೊಳಿಸು. ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಯುವವರನ್ನಾಗಿ ಮಾಡು. ಇಸ್ಲಾಂ ಮತ್ತು ಮುಸ್ಲಿಮರಿಗೆ ಘನತೆಯನ್ನು ತಂದುಕೊಡು. ಓ ಅಲ್ಲಾಹ್, ಕುವೈತ್ ದೇಶವನ್ನು ಮತ್ತು ಅದರ ಜನರನ್ನು ಎಲ್ಲ ಕೆಡುಕುಗಳಿಂದ ಕಾಯ್ದಿರಿಸು. ಈ ದೇಶವನ್ನು ಮತ್ತು ಇತರ ಎಲ್ಲ ಮುಸ್ಲಿಂ ದೇಶಗಳನ್ನು ಶಾಂತಿ-ನೆಮ್ಮದಿಯ ಧಾಮವನ್ನಾಗಿ ಮಾಡು. ನಮ್ಮ ಗಡಿ ಕಾಯುವ ಸೈನಿಕರನ್ನು ಮತ್ತು ದೇಶದ ಸುರಕ್ಷತೆಗೆ ಶ್ರಮಿಸುವವರನ್ನು ರಕ್ಷಿಸು. ನಮ್ಮ ಆಡಳಿತಗಾರರಿಗೆ ಮತ್ತು ಅವರ ಉತ್ತರಾಧಿಕಾರಿಗಳಿಗೆ ನಿನ್ನ ಮೆಚ್ಚುಗೆಯ ದಾರಿಯಲ್ಲಿ ನಡೆಯಲು ತೌಫೀಕ್ ನೀಡು. ನಮ್ಮ ಕೊನೆಯ ಪ್ರಾರ್ಥನೆ: ಎಲ್ಲ ಪ್ರಶಂಸೆಗಳೂ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮಾತ್ರ ಸಲ್ಲಿಕೆ.